# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 390 |
| **ಸದಸ್ಯರ ಹೆಸರು** | ಡಾ|| ತೇಜಸ್ವಿನಿ ಗೌಡ<br>(ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | 15.12.2021 |

| ಲೋಕೋಪಯೋಗಿ ಇಲಾಖೆಯಿಂದ ವರ್ಗಾಯಿತ | | |
|---|---|---|
| **ಕ್ರಸಂ** | **ಪ್ರಶ್ನೆಗಳು** | **ಉತ್ತರ** |
| ಅ. | ಐತಿಹಾಸಿಕ ಕೆಳದಿಯ 4ನೇ ರಾಜಧಾನಿ ಯಾಗಿದ್ದ ಕೆಳದಿಯ ವೀರರಾಣಿ ಚೆನ್ನಮ್ಮನವರು 25 ವರ್ಷ ಆಳ್ವಿಕೆ ಮಾಡಿದ ತೀರ್ಥಹಳ್ಳಿಯ "ಕವಲೆದುರ್ಗ" ತಾಣಕ್ಕೆ ರಸ್ತೆ ಸಂಪರ್ಕ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ<br><br>ತೀರ್ಥಹಳ್ಳಿ ತಾಲ್ಲೂಕಿನ ಕವಲೇದುರ್ಗಕ್ಕೆ ಸಾಲೂರು ಮಾಸ್ತಿಕಟ್ಟೆ ಮುಖ್ಯ ರಸ್ತೆಯಿಂದ ಕವಲೇದುರ್ಗ ಬೆಟ್ಟದ ಪ್ರಾರಂಭಕ್ಕೆ 2.10 ಕಿ.ಮೀ. (ಡಿ.ಆರ್.ಆರ್.ಪಿ) ಡಾಂಬರ್ ರಸ್ತೆ ಇರುತ್ತದೆ. |
| ಆ. | ಅತಿ ಹೆಚ್ಚು ಪ್ರವಾಸಿಗಳು ಹೋಗುವ ಈ ತಾಣಕ್ಕೆ ವಾಹನ ಹೋಗಲು ಯಾವಾಗ ರಸ್ತೆ ನಿರ್ಮಿಸಲಾಗುತ್ತದೆ; | ಸದರಿ ಜಿ.ಪಂ. ರಸ್ತೆಯನ್ನು (2.10 ಕಿ.ಮೀ.) ಪ್ರವಾಸೋದ್ಯಮ ಇಲಾಖೆಯ ಅನುದಾನದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಡಾಂಬರು ರಸ್ತೆ ಕಲ್ಪಿಸಲಾಗಿದೆ. ಇನ್ನೊಂದು ಕೂಡು ರಸ್ತೆಯ 500 ಮೀ. ಉದ್ದದಲ್ಲಿ ಪ್ರಾರಂಭವಾದ 100 ಮೀ. ರಸ್ತೆಯನ್ನು ಪ್ರವಾಸೋದ್ಯಮ ಇಲಾಖೆಯ ಅನುದಾನದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಡಾಂಬರು ರಸ್ತೆ ನಿರ್ಮಿಸ ಲಾಗಿದೆ. ಉಳಿದ 400 ಮೀ. ಸಂಪರ್ಕ ಕಾಲುದಾರಿಯು ಖಾಸಗಿ ಜಮೀನಿನಲ್ಲಿ ಇರುತ್ತದೆ. |
| ಇ. | ಹಿರಿಯರು ಮಹಿಳೆಯರು, ಮಕ್ಕಳು ಎಲ್ಲ ಋತುಮಾನಗಳಲ್ಲಿ ಸರಾಗವಾಗಿ ವಾಹನದಲ್ಲಿ ದುರ್ಗದ ತುತ್ತ ತುದಿಯವರೆಗೆ ಸಂಚರಿಸಲು ಅಗತ್ಯವಿರುವ ಸುಸಜ್ಜಿತ ರಸ್ತೆಯನ್ನು ಯಾವಾಗ ನಿರ್ಮಿಸಲಾಗುತ್ತಿದೆ; ಹಾಗೂ ಪ್ರವಾಸಿಗರಿಗೆ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಕ್ರಮವಹಿಸುವುದೇ? | ಬೆಟ್ಟದ ಪ್ರಾರಂಭದಿಂದ ದುರ್ಗದ ತುತ್ತ ತುದಿಗೆ ಬೆಟ್ಟದಲ್ಲಿ ಕಾಲುದಾರಿ ಇದ್ದು, ಸದರಿ ಜಾಗವು ಅರಣ್ಯ ಪ್ರದೇಶದಲ್ಲಿರುತ್ತದೆ. ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿರುವುದರಿಂದ ರಸ್ತೆ ನಿರ್ಮಿಸಲು ಅರಣ್ಯ ಇಲಾಖೆಯ ಸಹಮತಿ ಪಡೆಯಬೇಕಾಗಿದೆ. ಹಾಗೂ ಸಂಪರ್ಕದ ಕಾಲು ದಾರಿಯು ಖಾಸಗಿ ಜಮೀನಿನಲ್ಲಿರುವುದರಿಂದ ಜಮೀನು ಮಾಲೀಕರು ರಸ್ತೆಗೆ ಬಿಟ್ಟುಕೊಡಲು ಒಪ್ಪಿದಲ್ಲಿ ರಸ್ತೆ ನಿರ್ಮಿಸಬಹುದಾಗಿದೆ.<br><br>ಪ್ರವಾಸಗರಿಗೆ ಮೂಲಭೂತ ಸೌಕರ್ಯ ಗಳಾದ ಸುಸಜ್ಜಿತ ಶೌಚಾಲಯ ವ್ಯವಸ್ಥೆ ಇದ್ದು, ಕುಡಿಯುವ ನೀರಿನ ಸೌಲಭ್ಯ ವ್ಯವಸ್ಥೆ ಕಲ್ಪಿಸಬೇಕಿದೆ. |

ಸಂಖ್ಯೆ: ಗ್ರಾಅಪ:15ನೇವಿಸ:145:ಆರ್.ಆರ್.ಸಿ:2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು